ಚಿತ್ರದುರ್ಗ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖೆ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿಗೆ ಶೇರಿದ ಯಿದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ದೊರಿಯುವ ತಂಗಡಿ, ನಾಯಿಬೇಲ ಮತ್ತು ಕಕ್ಕೆ ಚಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಯಿಜಾರೆಯ ವಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮೂಲಕ ಡೆಪ್ಯೂಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಆಫಿಸರ ಮೂಲಕ ವಿಕ್ರಯಿಸಲ್ಪಡುತ್ತ. ಹರಾಜು ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಯೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ನಂಬರು.	ಹೋಬಳಿಗಳು.	ಹರಾಜು ತಾರೀಖು.	ಹರಾಜು ಹಾಕುವ ಸ್ಥಳ.	ಇಜಾರೆ ಹಕ್ಕಿನ ಕಾಲ.	ಪರಾ.
ಜಗಲೂರು ..	1	ಸೊಕ್ಕೆ	1896ನೇ ಇಸವಿ ಸೆಪ್ಟಂಬರ್ ತಾರೀಖು 24	ಜಗಲೂರು	1896ನೇ ಇಸವಿ ನವಂಬರು ಗುರ್ವೋ ಬಾಗಾಯತು 1897ನೇ ಇಸವಿ ಜೂನ್ ಆಖೈರುವರಿಗೆ.	ಅಲ್ಲೂಸೂನರು ಮತ್ತು ಕಾವಲುಗಾರಿಗೆ ಬಗಲಿ ಆಫೀಸಾ ಹೋಬಳಿಗಾರಗಲಿ ಹರಾಜು ನೂ ಚುವ ಆಫಿಸರವರಿಗೆ ಮುನಾಸಬು ತೋರಿದಂತೆ ಹರಾಜು ಕೂಗಲ್ಪಡುತ್ತವೆ.
	2	ಬಿಳಜೋಡು				
	3	ಜಗಲೂರು				
	4	ಅಮೃತಮಹಲ್ ಕಾವಲ್				
ದಾವಣಗೆರೆ ...	1	ದಾವಣಗೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 28	ದಾವಣಗೆರೆ		
	2	ಆನಗೋಡು				
	3	ಮಾಯಕೊಂಡೆ				
	4	ಅಣಜಿ				
	5	ಹದಡಿ				
	6	ಹರಿಹರ				
	7	ಮಲೆಬೆನ್ನೂರು				
	8	ಅಮೃತಮಹಲ್ ಕಾವಲುಗಳು				
ಹೊಳಲ್ಕೆರೆ ...	1	ಹೊಳಲಕೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 30	ಹೊಳಲ್ಕೆರೆ		
	2	ರಾಮಗಿರಿ				
	3	ಬರಮನಾಯಕನದುರ್ಗ				
	4	ತಾಳ್ಯ				
	5	ಹೊಸದುರ್ಗ				
	6	ಬಾಗೂರು				
	7	ಅಮೃತಮಹಲ್ ಕಾವಲು				
ಮೊಳಕಾಲುಮುರು	1	ಮೊಳಕಾಲುಮುರು	ಡಿಟೋ	ಮೊಳಕಾಲ್ ಮುರು.		
	2	ದೇವಸಮುದ್ರ				
	3	ಅಮೃತಮಹಲ್ ಕಾವಲು				

2. ಮೇಲ್ಕಂಡ ತಾರೀಖಿನಲ್ಲಿ ಮಧ್ಯಾನ್ವದ ಬಾಗಾಯತು ಸಾಯಿಂಕಾಲವವರಿಗೂ ಹರಾಜ್ ಕ್ರಮ ಜರಿಗಿಸುವದು.

3. ಮೇಲ್ಕಂಡ ವಟ್ಟು ಸ್ವತಂತ್ರದ ಇಜಾರೆ ಹಕ್ಕು ಆಖೈರು ಜೆಡದಖಾಸ್ತುದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಹರಾಜು ನಡಿಸುವ ಆಫಿಸರವರು ಮೊಖ್ತಾರ್ರಾಗಿ ಯಿದ್ದಾರೆ. ಪೋಟುಪೋಟಿಯಲ್ಲಿ ನಿಲ್ಲುವ ಆಖೈರು ಜೆಡಸವಾಲು ಮೊಬಲಗು ಮೇಲ್ಕಂಡ ಯಂಟು ತಿಂಗಳು ಕಾಲದಲ್ಲಿ ಕಡಿದು ಜಮಾ ಯಿಸಿಕೊಳ್ಳಲ್ಪಡುವ ಜಕ್ಕೆಯ ಖರೀದಿಯಂದು ಭಾವಿಸಲ್ಪಡುತ್ತದೆ.

4. ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದುಬಂದು ಹರಾಜಿನಲ್ಲಿ ಜಡಸವಾಲು ಮಾಡಬಹುದು ಅಥವಾ ತಮ್ಮಿಂದ ಆಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳಹಿಸಬಹುದು. ಜಡ ಸವಾಲು ಮಾಡಲಪೇಕ್ಷೆವುಳ್ಳವರು ಖಾತರೀ ಬಗ್ಗಾಗಿ ಐವತ್ತು ರೂಪಾಯಿಗಳನ್ನು ಹರಾಜ್ ಕಾಲದಲ್ಲಿ ಹರಾಜ್ ಮಾಡುವ ಆಫಿಸರವರಲ್ಲಿ ತೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರುಮಾಡಿದ್ದ ಡಿಪಾಜಿಟ್ಟು ಮೊಬಲಗನ್ನು ಹರಾಜ್ ಕೈದಾದ ಕೂಡ್ಲೆ ಡಿಪಾಜಿಟ್ಟುದಾರ್ರಿಗೆ ವಾಪಸು ಮಾಡಲ್ಪ ಡುತ್ತದೆ. ಅಂಗೀಕರಿಸಲ್ಪಟ್ಟ ಸವಾಲುದಾರ್ರುಗಳು ತಮ್ಮ ಸವಾಲಿನ ಪೈಟ್ಟು ಮೊಬಲಗಿನಲ್ಲಿ ಮೊದಲು ಹಾಜರ್ಮಾಡಿದ್ದ ಮೊಬಲಗು ಸೇರಿ ಕಾಲುಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟುಇರ್ದ ಡಿಪಾಜಿಟ್ಟು ಸರ್ತಾರಕ್ಕೆ ದಂಡವಾಗಿ ಸೇರಿಸಿ ಕೊಳ್ಳಲ್ಪಡುವದೂ ಅಲ್ಲದೆ ಬಾಬನ್ನ ದುಸರಾ ಹರಾಜ್ ಮಾಡಿಸುವದರಲ್ಲಿ ವುಂಟಾಗುವ ನಷ್ಟಕ್ಕೂ ಈತನನ್ನೇ ಗುರುವಾಡಲ್ಪಡುತ್ತದೆ.

5. ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಯರಡನೇ ಹರಾಜಿನಲ್ಲಿ ಮೊದಲಿನ ಹರಾಜ್ ಚಡದರಖಾಸ್ತಿಗಿಂತ ಮೊಬಲಗು ಜಾಸ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಮೊಬಲಗು ಕಮ್ಮಿಯಾದಲ್ಲಿ ಅಂಥಾ ಮೊಬಲಗನ್ನ ಅವಲ್ ಚಡದರಖಾಸ್ತುದಾರನಿಂದ ರೆವಿನ್ಯೂ ಡಿವ್ಯೋಂಡಿನಂತೆ ವಸೂಲು ಮಾಡಲ್ಪಡುತ್ತದೆ.

6. ಇಜಾರೆ ಬಾಬತು ಬಾಕಿ ಮುಕ್ತಾಲು ಹಿಸ್ಸೆಯನ್ನ ಇದೇ ಇಸವಿ ಅಕ್ಟೋಬರ್ ಮಾಹೆ ಆಖೈರುವಳಗಾಗಿ ಖಜಾನೆಗೆ ಪಾರ್ಖಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ತೇವಣಿಯು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುತ್ತದೆ, ಅಲ್ಲದೆ ಜಕ್ಕೆ ಜವಾಯಿಸುವ ಹಕ್ಕು ಸಹ ಪುನಃ ಹರಾಜು ಮಾಡಲ್ಪಡುತ್ತದೆ.

7. ಹರಾಜು ಮುಂಜೂರಾದ ಮೂರು ದಿವಸಗಳೊಳಗಾಗಿ ಇಜಾರೆದಾರನು ಈ ಕೆಳಗೆ ನಮೂದಿಸುವ ಷರತ್ತುಗಳ ಪ್ರಕಾರ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು.

8. ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲು ಆದ ನಂತರ ಈ ಕೆಳಗೆ ನಮೂದಿಸಿರುವ ಷರತ್ತುಗಳು ಕಂಡು ಸರಿಯಾದ ಕಿಮ್ಮತಿನ ಛಾಪಾಕಾಗದದಲ್ಲಿ ಇದೇ ಇಸವಿ ನವಂಬರು ಗುರ್ಜೆ ತಾರೀಖಿನಲ್ಲಿ ಕರಾರು ಬರದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳ್ಯಾವವಂದರೆ:—

(1) ಬಂದುವರುಪಕ್ಕಿಂತಲೂ ಎಳೇದಾದ ಗಿಡವನ್ನ ಕಡಿಯುವದಿಲ್ಲ.

(2) ಕಡಿಯುವ ವಿಷಿಷ್ಟ ವೋಟೂ ಮತ್ತು ರೆಂಬೆಗಳಲ್ಲಿರುವ ಜಕ್ಕೆಯನ್ನ ನಿಶ್ಯೇಷನಾಗಿ ತೆಗದುಕೊಳ್ಳುತ್ತೇನೆ. ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಜಕ್ಕೆಯನ್ನ ತೆಗಿಯದೆ ಬಿಡುವದಿಲ್ಲ.

(3) ಜಕ್ಕೆಯನ್ನ ತೆಗದ ನಂತರ ವಿಷಿಷ್ಟ ಸಾದೆಯೂ ಇಜಾರೆದಾರನಿಗೆ ಕೇರಿದ್ದೇ ಶಿವಾಯಿ ಸರ್ಕಾರಕ್ಕೆ ಕೇರಿದ್ದಲ್ಲ.

(4) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿ ಪೊಂದು ಗಾಡಿಯ ಜಕ್ಕೆಗೂ ಪ್ಯಾಸು ಪಡಿಯುತ್ತೇನೆ.

(5) ಡೆಪ್ಯೂಟಿ ಕಮ್ಮಿಷನರು ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ನೌಕರರೇ ಆಗಲಿ ಮೊಕರರು ಮಾಡುವ ಮೇರಿಗೆ ಕರಾರು ಅನುಸರಿಸಿ ಜವಾಯಿಸಿಕೊಂಡು ಹೋಗುವ ಜಕ್ಕೆಗೆ ತಪ್ಪೀಲಾಗಿ ಲೆಕ್ಕ ಇಡುತ್ತೇನೆ ಅಲ್ಲದೆ ಈ ಬಾಬತು ಲೆಕ್ಕವನ್ನು ಡೆಪ್ಯೂಟಿ ಕಮ್ಮಿಷನರು ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಇತರ ಆಫಿಸರು ಕೇಳಿದಾಗ್ಯೆ ತನಖೀಬಿಗ್ಯೆ ಹಾಜರುಮಾಡುತ್ತೇನೆ.

(6) ನಾನು ಜವಾಯಿಸುವ ವಿಷಿಷ್ಟ ಜಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರ್‌ವಳಗಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೀಪ್ ಫಾರೆಸ್ಟ್ ಮತ್ತು ಪ್ಲಾಂಟೇಷ್ಟಗಳಲ್ಲಿ ಸಹ ನನ್ನಿಂದಾಗಲಿ ನನ್ನ ಕಡೆ ಜನಗಳಿಂದಾಗಲಿ ಬೆಂಕಿ ಅಪಾಯವೇ ಮೊದಲಾದ ಇನ್ಯಾವ ಕಾರಣಗಳಿಂದಾಗಲಿ ಖರೀದಿ ಬುಳತಕ್ಕ ಮರಗಳು ಅಥವಾ ಫಸಲುಗಳು ನಾಶವಾದಲ್ಲಿ ಅದರಿಂದುಂಟಾಗುವ ನಷ್ಟಕ್ಕೆ ನಾನೇ ಜವಾಬು ಮಾಡಲು ಬದ್ಧನಾಗಿದ್ದೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ್ ಜನಗಳಾಗಲಿ ಅತಿಕ್ರಮಿಸಿ ನಡದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡುಬಹುದು. ಮತ್ತು ನಾನು ಅದುವರಿಗೆ ಜವಾಯಿಸಿ ಹಾಜರು ಯಿಟ್ಟುಕೊಂಡು ಯಿರತಕ್ಕ ಜಕ್ಕೆಯನ್ನ ಸರ್ಕಾರದವರು ಜಪ್ತ್ಮಾಡಬಹುದು.

ತಾರೀಖು 4ನೇ ಸೆಪ್ಟಂಬರ್ 1896.

ಯಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.

Mysore Govt. Central Press, Bangalore.—1896.